# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **816**

ಸದಸ್ಯರ ಹೆಸರು : **ಶ್ರೀ. ಐವನ್ ಡಿ' ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು)**

ಉತ್ತರಿಸುವ ದಿನಾಂಕ : **23/07/2024**

ಉತ್ತರಿಸುವ ಸಚಿವರು : **ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು**

| | ಪ್ರಶ್ನೆ | ಉತ್ತರ |
|---|---|---|
| ಅ | ಮಹಾನಗರ ಪಾಲಿಕೆ ಸದಸ್ಯರುಗಳ ಗೌರವಧನವನ್ನು ಹೆಚ್ಚಿಸಬೇಕೆಂಬ ಬೇಡಿಕೆ ಇದ್ದು, ಇದನ್ನು ಹೆಚ್ಚಿಸಲು ಕ್ರಮಕೈಗೊಳ್ಳಲಾಗಿದೆಯೇ; ಪ್ರಸ್ತುತ ನೀಡುವ ಗೌರವಧನ ಎಷ್ಟು (ವಿವರ ನೀಡುವುದು); | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರು ಹಾಗೂ ಮಹಾನಗರ ಪಾಲಿಕೆಗಳ ಮೇಯರ್-ಉಪಮೇಯರ್, ಸದಸ್ಯರ ಗೌರವಧನವನ್ನು ಹೆಚ್ಚಳ ಮಾಡುವುದಕ್ಕಾಗಿ ಪರಿಶೀಲಿಸಿ, ಪ್ರಸ್ತುತ ನೀಡುತ್ತಿರುವ ಗೌರವಧನವನ್ನು ಪರಿಷ್ಕರಿಸಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆಯು ದಿನಾಂಕ:02/05/2023 ಮತ್ತು ದಿ:23/01/2024 ರಂದು ಗೌರವಧನವನ್ನು ಪರಿಷ್ಕರಿಸುವ ಪ್ರಸ್ತಾವನೆಯನ್ನು ತಿರಸ್ಕರಿಸಿರುತ್ತದೆ. ಪ್ರಸ್ತುತ ಗೌರವಧನ ಪರಿಷ್ಕರಣೆ ಮಾಡುವ ಹಾಗೂ ಆರೋಗ್ಯ ವಿಮೆ ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.<br><br>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷರು, ಸದಸ್ಯರು ಹಾಗೂ ಮಹಾನಗರ ಪಾಲಿಕೆಗಳ ಮೇಯರ್-ಉಪಮೇಯರ್, ಸದಸ್ಯರಿಗೆ ಪ್ರಸ್ತುತ ಪಾವತಿಸುತ್ತಿರುವ ಮಾಸಿಕ ಗೌರವಧನದ ವಿವರಗಳ ಆದೇಶ ಸಂಖ್ಯೆ:ನಅಇ 156 ಎಂಎಲ್ಆರ್ 2015; ದಿನಾಂಕ:15/09/2016 ನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಆ | ಮಹಾನಗರ ಪಾಲಿಕೆ ಸದಸ್ಯರುಗಳಿಗೆ ಆರೋಗ್ಯದ ವಿಮೆ ನೀಡಲು ಕ್ರಮಕೈಗೊಳ್ಳಲಾಗಿದೆಯೇ; | |
| ಇ | ಅನೇಕ ನಗರ/ಪಾಲಿಕೆ ಸದಸ್ಯರು ತಮ್ಮ ನಿವೃತ್ತಿಯ ನಂತರ ಅನಾರೋಗ್ಯಕ್ಕೆ ಬಲಿಯಾಗುತ್ತಿದ್ದು ಅವರು ಪಿಂಚಣಿಯಿಲ್ಲದೆ ಆರ್ಥಿಕವಾಗಿ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಆರೋಗ್ಯ ವಿಮೆ ನೀಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | |
| ಈ | ಮಂಗಳೂರು ಮಹಾನಗರ ಪಾಲಿಕೆ 2022-23, 2023-24 ರಲ್ಲಿ ಬಿಡುಗಡೆ ಮಾಡಿದ ವಿಶೇಷ ಅನುದಾನ ಎಷ್ಟು (ವಿವರ ನೀಡುವುದು)? | ಮಂಗಳೂರು ಮಹಾನಗರ ಪಾಲಿಕೆಗೆ 2022-23, 2023-24 ರಲ್ಲಿ ಬಿಡುಗಡೆ ಮಾಡಿದ ವಿಶೇಷ ಅನುದಾನದ ವಿವರವನ್ನು ಅನುಬಂಧ-2 ರಲ್ಲಿ ಒದಗಿಸಿದೆ. |

**ಸಂಖ್ಯೆ:ನಅಇ 51 ಎಲ್‌ಸಿಕ್ಯೂ 2024.**

(ಸುರೇಶ್ ಬಿ.ಎಸ್)

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು / ಉಪ ಮಹಾಪೌರರು / ಅಧ್ಯಕ್ಷ / ಉಪಾಧ್ಯಕ್ಷ ಮತ್ತು ಸದಸ್ಯರುಗಳ (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ) ಮಾಸಿಕ ಗೌರವ ಧನ ಹೆಚ್ಚಿಸುವ ಕುರಿತು.

ಓದಲಾಗಿದೆ: 1)ಸರ್ಕಾರದ ಆದೇಶ ಸಂಖ್ಯೆ: ನಅಇ 63 ಎಂಎನ್ಇ 98, ದಿನಾಂಕ:09.03.1999.
2)ಸರ್ಕಾರದ ಆದೇಶ ಸಂಖ್ಯೆ:ನಅಇ 114 ಎಂಎಲ್ಆರ್ 2002 ದಿನಾಂಕ:03.05.2005.
3)ಸರ್ಕಾರದ ಆದೇಶ ಸಂಖ್ಯೆ:ನಅಇ 94 ಎಂಎಲ್ಆರ್ 2010 ದಿನಾಂಕ:31.08.2010.
4)ಆಯುಕ್ತರು, ಮಹಾನಗರಪಾಲಿಕೆ, ಕಲಬುರ್ಗಿ, ಬಳ್ಳಾರಿ, ಹುಬ್ಬಳ್ಳಿ-ಧಾರವಾಡ, ಮಂಗಳೂರು ಇವರುಗಳ ಪ್ರಸ್ತಾವನೆ.
5)ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಕಚೇರಿಯ ಪತ್ರಸಂಖ್ಯೆ:ಪೌನಿ/ಇತರೆ/ಸಿಆರ್/46/2015-16, ದಿನಂಕ:11.08.2015.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) (2) ಮತ್ತು (3)ರ ಆದೇಶಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು/ಉಪಮಹಾಪೌರರು/ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸದಸ್ಯರ ಮಾಸಿಕ ಗೌರವಧನವನ್ನು ನಿಗಧಿಪಡಿಸಿ/ಪರಿಷ್ಕರಿಸಿ ಆದೇಶ ಹೊರಡಿಸಲಾಗಿದೆ. ಮೇಲೆ ಓದಲಾದ (4) ಆಯುಕ್ತರು, ಮಹಾನಗರಪಾಲಿಕೆ, ಕಲಬುರ್ಗಿ, ಬಳ್ಳಾರಿ, ಹುಬ್ಬಳ್ಳಿ-ಧಾರವಾಡ, ಮಂಗಳೂರು ಇವರುಗಳ ಪ್ರಸ್ತಾವನೆ ಹಾಗೂ ಮೇಲೆ ಓದಲಾದ (5)ರ ನಿರ್ದೇಶಕರು, ಪೌರಾಡಳಿತ ನಿರ್ದೇಶನಲಯ, ಬೆಂಗಳೂರು ಇವರ ಪ್ರಸ್ತಾವನೆಯಲ್ಲಿ, ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು/ಉಪ ಮಹಾಪೌರರು/ಅಧ್ಯಕ್ಷರು/ಉಪಾಧ್ಯಕ್ಷರು ಮತ್ತು ಸದಸ್ಯರುಗಳ ಮಾಸಿಕ ಗೌರವ ಧನವನ್ನು ಹೆಚ್ಚಿಸಲು ಹಾಗೂ ಪ್ರಸ್ತಾವನೆಯನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಸಾಮಾನ್ಯ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು, ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಿ, ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು/ಉಪಮಹಾಪೌರರು/ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸದಸ್ಯರ (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ) ಮಾಸಿಕ ಗೌರವಧನವನ್ನು ಪರಿಷ್ಕರಿಸಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

### ಸರ್ಕಾರದ ಆದೇಶ ಸಂಖ್ಯೆ: ನಅಇ 156 ಎಂಎಲ್ಆರ್ 2015, ದಿ:15.09.2016.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನಗರ ಸ್ಥಳೀಯ ಸಂಸ್ಥೆಗಳ ಮಹಾಪೌರರು/ಉಪಮಹಾಪೌರರು/ಅಧ್ಯಕ್ಷರು/ಉಪಾಧ್ಯಕ್ಷರು ಹಾಗೂ ಸದಸ್ಯರುಗಳ (ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹೊರತುಪಡಿಸಿ) ಮಾಸಿಕ ಗೌರವಧನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತಿಗೊಳಪಟ್ಟು ಹಾಗೂ ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಿದೆ.

| ಕ್ರ ಸಂ | ಹುದ್ದೆ | ಪರಿಷ್ಕೃತ ಗೌರವಧನ (ರೂ. ಗಳಲ್ಲಿ) |
|---|---|---|
| | ಮಹಾನಗರಪಾಲಿಕೆ | |
| 1. | ಮಹಾಪೌರರು | 16,000/- |
| 2. | ಉಪ ಮಹಾಪೌರರು | 10,000/- |
| 3. | ಸದಸ್ಯರು | 6,000/- |
| 4. | ಸ್ಥಾಯಿ ಸಮಿತಿ ಸದಸ್ಯರು | 400/- (ಮಾಸಿಕ ರೂ. ೩೦೦-00 ಮೀರದಂತೆ) |

Scanned with OKEN Scanner

| | | |
|---|---|---|
| | **ನಗರಸಭೆಗಳು** | |
| 1. | ಅಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು) | 12,000/- |
| 2. | ಉಪಾಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು) | 8,000/- |
| 3. | ಸದಸ್ಯರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಮೇಲ್ಪಟ್ಟು ವರಮಾನ ಇರುವ ನಗರಸಭೆಗಳು) | 4,000/- |
| 4. | ಅಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು) | 8,000/- |
| 5. | ಉಪಾಧ್ಯಕ್ಷರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು) | 4,000/- |
| 6. | ಸದಸ್ಯರು<br>(ವಾರ್ಷಿಕವಾಗಿ ರೂ.5 ಕೋಟಿ ಮತ್ತು ಕಡಿಮೆ ವರಮಾನ ಇರುವ ನಗರಸಭೆಗಳು) | 2,000/- |
| 7. | ಸ್ಥಾಯಿ ಸಮಿತಿ ಸದಸ್ಯರು | 400/-<br>(ಮಾಸಿಕ ರೂ.800-00 ಮೀರದಂತೆ) |
| | **ಪುರಸಭೆಗಳು** | |
| 1. | ಅಧ್ಯಕ್ಷರು | 4,800/- |
| 2. | ಉಪಾಧ್ಯಕ್ಷರು | 2,400/- |
| 3. | ಸದಸ್ಯರು | 1,200/- |
| 4. | ಸ್ಥಾಯಿ ಸಮಿತಿ ಸದಸ್ಯರು | 300/-<br>(ಮಾಸಿಕ ರೂ.600-00 ಮೀರದಂತೆ) |
| | **ಪಟ್ಟಣ ಪಂಚಾಯಿತಿ** | |
| 1. | ಅಧ್ಯಕ್ಷರು | 3,200/- |
| 2. | ಉಪಾಧ್ಯಕ್ಷರು | 1,600/- |
| 3. | ಸದಸ್ಯರು | 800/- |
| 4. | ಸ್ಥಾಯಿ ಸಮಿತಿ ಸದಸ್ಯರು | 200/-<br>(ಮಾಸಿಕ ರೂ.400-00 ಮೀರದಂತೆ) |

**ಷರತ್ತುಗಳು:**

1. ಈ ಗೌರವಧನದ ವೆಚ್ಚವನ್ನು ಆಯಾಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಸಂಪನ್ಮೂಲಗಳಿಂದ ಭರಿಸಿಕೊಳ್ಳತಕ್ಕದ್ದು. ಸರ್ಕಾರದಿಂದ ಈ ಬಗ್ಗೆ ಯಾವುದೇ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.
2. ಸ್ಥಾಯಿ ಸಮಿತಿ ಸದಸ್ಯರು, ಪ್ರತಿ ತಿಂಗಳಿಗೆ ಗರಿಷ್ಠ ಎರಡು ಸಭೆಯ ಭತ್ಯೆಗೆ ಮಾತ್ರ ಅರ್ಹರಿರುತ್ತಾರೆ.
3. ಮುಂದಿನ ಐದು ವರ್ಷದವರೆಗೆ ಗೌರವಧನವನ್ನು/ಭತ್ಯೆಗಳನ್ನು ಹೆಚ್ಚಿಸುವ ಅಥವಾ ಪರಿಷ್ಕರಿಸುವ ಬಗ್ಗೆ ಪರಿಗಣಿಸುವಂತಿಲ್ಲ.

Scanned with OKEN Scanner

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 674 ಸೇ-3/2016 ದಿನಾಂಕ:02.08.2016ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

15/9/16
(ಸಿದ್ಧಿಕ್ ಪಾಷ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.
15/9

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸ ಸೌಧ ಬೆಂಗಳೂರು- ಮುಂದಿನ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 250 ಪ್ರತಿಗಳನ್ನು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಲು ಕೋರಲಾಗಿದೆ.

ಪ್ರತಿ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
4. ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕೆ.ಯೂ.ಐ.ಡಿ.ಎಫ್.ಸಿ. ಬೆಂಗಳೂರು.
6. ಆಯುಕ್ತರು, ಎಲ್ಲಾ ಮಹಾನಗರಪಾಲಿಕೆಗಳು.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ಎಲ್ಲಾ ಜಿಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ.
9. ಮಾನ್ಯ ಪೌರಾಡಳಿತ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
10. ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
11. ಎಲ್ಲಾ ಜಿಲ್ಲಾ ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ.
12. ಎಲ್ಲಾ ನಗರಸಭೆಗಳ ಪೌರಾಯುಕ್ತರು.
13. ಎಲ್ಲಾ ಪುರಸಭೆಗಳ / ಪಟ್ಟಣ ಪಂಚಾಯಿತಿಗಳ ಮುಖ್ಯಾಧಿಕಾರಿಗಳು.
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned with OKEN Scanner

## SFC SPECIAL GRANTS 2022-23 RELEASE (Mangaluru)

Rs. in Lakhs

| SL.NO | District | Name Of the Town | ULB Type | YEAR | Allocation Order No | Release Order No | Grants Allocation | Grants Released 01-04-2022 | Previuos Release | Total Released | Balance |
|---|---|---|---|---|---|---|---|---|---|---|---|
| 1 | Dakshin kanada | Mangaluru | CC | 2019-20 | UDD 219 SFC 2019 07-09-2019 | UDD 22 SFC 2022 04-06-2022 | 1500.00 | 162.32 | 1071.58 | 1233 90 | 266.10 |
| 2 | | | | 2019-20 | UDD 219 SFC 2019 07-09-2019 | UDD 184 SFC 2022 12-08-2022 | 1500 00 | 73.90 | 1233.90 | 1307.80 | 192.20 |
| 3 | | | | 2019-20 | UDD 219 SFC 2019 07-09-2019 | UDD 184 SFC 2022 12-08-2022 | 1000.00 | 200.00 | 599.12 | 799.12 | 200.88 |
| 4 | | | | 2017-18 | UDD 226 SFC 2017 17-11-2017 | UDD 184 SFC 2022 12-08-2022 | 1000 00 | 139.56 | 750.00 | 889.56 | 110.44 |
| 5 | | | | 2019-20 | UDD 219 SFC 2019 07-09-2019 | UDD 243 SFC 2022 14-11-2022 | 1500.00 | 49.93 | 1307.80 | 1357.73 | 142 27 |
| 6 | | | | 2019-20 | UDD 219 SFC 2019 07-09-2019 | UDD 243 SFC 2022 14-11-2022 | 1000.00 | 85.61 | 799.12 | 884.73 | 115.27 |
| 7 | | | | 2021-22 | UDD 238 SFC 2021 02-11-2021 | UDD 243 SFC 2022 14-11-2022 | 1500 00 | 295.54 | 0.00 | 295.54 | 1204 46 |
| **TOTAL** | | | | | | | **9000.00** | **1006.86** | **5761.52** | **6768.38** | **2231.62** |

## SFC SPECIAL GRANTS 2023-24 RELEASE (Mangaluru)

| SL.NO | District | Name Of the Town | ULB Type | YEAR | Allocation Order No | Release Order No | Grants Allocation | Grants Released 01-04-2023 | Previuos Release | Total Released | Balance |
|---|---|---|---|---|---|---|---|---|---|---|---|
| 1 | Dakshin kanada | Mangaluru | CC | 2019-20 | UDD 219 SFC 2019 07-09-2019 | UDD 55 SFC 2023 28-09-2023 | 1500.00 | 19.73 | 1357.73 | 1377.46 | 122.54 |
| 2 | Dakshin kanada | Mangaluru | CC | 2019-20 | UDD 219 SFC 2019 07-09-2019 | UDD 55 SFC 2023 28-09-2023 | 1000.00 | 85.47 | 884.73 | 970 20 | 29.80 |
| 3 | Dakshin kanada | Mangaluru | CC | 2021-22 | UDD 238 SFC 2021 02-11-2021 | UDD 55 SFC 2023 28-09-2023 | 1500.00 | 24.29 | 295.54 | 319.83 | 1180.17 |
| 4 | Dakshin kanada | Mangaluru | CC | 2022-23 | UDD 310 SFC 2022 05-12-2022 | UDD 55 SFC 2023 28-09-2023 | 2000.00 | 15.40 | 0.00 | 15.40 | 1984.60 |
| 5 | Dakshin kanada | Mangaluru | CC | 2021-22 | UDD 238 SFC 2021 02-11-2021 | UDD 229 SFC 2023 27-03-2024 | 1500.00 | 175.95 | 319.83 | 495.78 | 1004.22 |
| **TOTAL** | | | | | | | **7500.00** | **320.84** | **2857.83** | **3178.67** | **4321.33** |

Chief Project Officer
Directorate of Municipal Adm...